# ಛಂದಸ್ಸು- ಪ್ರವೇಶಿಕೆ

**www.padyapaana.com**

**Date: Nov-2011**

## Contents

ಛಂದಸ್ಸು: 3
ಗಣ: 4
ವರ್ಣಗಣ: 4
ಮಾತ್ರಾಗಣ: 5
ಪ್ರಾಸ: 6
ಆದಿಪ್ರಾಸ: 6
ಅನುಪ್ರಾಸ: 8
ಅಂತ್ಯ ಪ್ರಾಸ: 8
ಯತಿ: 8
ಕೆಲವು ಛಂದ :ಪ್ರಕಾರಗಳ ಲಕ್ಷಣಗಳು: 11
ಮಾತ್ರಾವೃತ್ತಗಳು 11
ಷಟ್ಪದಿ: 11

## ಛಂದಸ್ಸು:

ಭಾಷೆಗೆ ವ್ಯಾಕರಣದಂತೆ ಛಂದಸ್ಸೂ ಸಾಧಕವಾಗಿರುವುದು. ಆದರೆ ವ್ಯಾಕರಣವು ಗದ್ಯಪದ್ಯಗಳೆರಡಕ್ಕೂ, ಛಂದಸ್ಸು ಪದ್ಯಮಾತ್ರಕ್ಕೂ ಸಂಬಂಧಿಸುವುದು. ವಿಸ್ತೃತವಾದ ವಿಷಯವನ್ನು ಸಂಗ್ರಹಿಸಿ ಹೇಳಲೂ, ರಸವತ್ತಾದ ಅಂಶವನ್ನು ಮನೋಹರವಾಗಿ ತಿಳಿಸಲೂ, ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಲೂ ಪದ್ಯವು ಬಹಳ ಅನುಕೂಲ. ಪದ್ಯಗಳ ನಿಯಮವನ್ನು ಛಂದಶ್ಶಾಸ್ತ್ರವು ತಿಳಿಸುವುದು. ಪದ್ಯವು ಪಾದದಿಂದ ಕೂಡಿರುವುದು. ಪದ್ಯದ ಪಾದವು ಗಣ, ಮತ್ತು ಪ್ರಾಸಗಳ ನಿಯಮವುಳ್ಳ ಶಬ್ದಸಂಘಟನೆಯಾಗಿರುವುದು. ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತದಿಂದ ತೆಗೆದುಕೊಂಡಿರುವ ಛಂದಸ್ಸುಗಳೂ, ಅಚ್ಚಗನ್ನಡ ಛಂದಸ್ಸುಗಳೂ ಉಂಟು.

## ಮಾತ್ರೆ - ಗುರು - ಲಘು:

ಒಂದು ಹ್ರಸ್ವಾಕ್ಷರವನ್ನು (ಲಘ್ವಕ್ಷರವನ್ನು) ಉಚ್ಚರಿಸಲು ಬೇಕಾಗುವ ಸಮಯಕ್ಕೆ ಒಂದು ಮಾತ್ರೆ ಅಥವಾ ಮಾತ್ರಾಕಾಲವೆನ್ನುವರು. ಗುರ್ವಕ್ಷರಕ್ಕೆ ಎರಡು ಮಾತ್ರೆಗಳು. ಲಘುವನ್ನು 'U' ಈ ಚಿಹ್ನೆಯಿಂದಲೂ ಗುರುವನ್ನು '-' ಈ ಚಿಹ್ನೆಯಿಂದಲೂ ಗುರುತಿಸುವುದು ರೂಢಿಯಾಗಿದೆ.

ಉದಾ: ಲಘುವಿಗೆ- ಅ, ಯ, ಕ, ಷ, ಛ, ಸ್ಥ, ನ.

ಗುರುವಿಗೆ- ಆ, ಕೈ, ಈ, ಸೂ, ಕಂ, ಬುದ್ಧಿ, ಪುನಃ

*ಸ್ವರವು ಸೇರದಿರುವ ವ್ಯಂಜನಗಳು ಅರ್ಧಾಕ್ಷರಗಳು (ಅರ್ಧ ಮಾತ್ರೆಯವು) ಎನಿಸುತ್ತವೆ. ಅವಕ್ಕೆ ಹ್ರಸ್ವಸ್ವರವು ಸೇರಿದರೆ ಲಘ್ವಕ್ಷರಗಳಾಗುವುವು, ದೀರ್ಘವು ಸೇರಿದರೆ ಗುರ್ವಕ್ಷರಗಳಾಗುವುವು. ಏನೂ ಸೇರದೆ (ಇದ್ದಂತೆ) ಇದ್ದರೆ ಅವುಗಳ ಹಿಂದಿನ ಅಕ್ಷರಗಳು ಗುರ್ವಕ್ಷರಗಳಾಗುವುವು.

ಉದಾ:- ಅವಳ್, ಏನಯ್, ಅತ್ತಲ್, ಎಂದಳ್, ನಡೆಯಲ್, ದಲ್.

ಹ್ರಸ್ವಾಕ್ಷರಗಳೆಲ್ಲ ಲಘ್ವಕ್ಷರಗಳೆಂದೂ ಅವಕ್ಕೆ ಒಂದೊಂದೇ ಮಾತ್ರೆಯೆಂದೂ ತಿಳಿದುಕೊಳ್ಳಬೇಕು.

ದೀರ್ಘಾಕ್ಷರ, ಬಿಂದು ಸೇರಿದ ಅಕ್ಷರ, ವಿಸರ್ಗವು ಸೇರಿದ ಅಕ್ಷರ, ವ್ಯಂಜನವು ಸೇರಿದ ಅಕ್ಷರ, ಒತ್ತಿನ ಅಕ್ಷರದ ಹಿಂದಿನ ಅಕ್ಷರ ಮತ್ತು ಪಾದದ ಅಂತ್ಯಾಕ್ಷರ- ಇವು ಗುರ್ವಕ್ಷರಗಳೆನಿಸುತ್ತವೆ.

ಉದಾ:- ದೀರ್ಘಕ್ಕೆ - ದೇವ, ಮಾತೆ, ಸಾಧನ, ಕೈದು ತೌಡು,

ಬಿಂದು ಸೇರಿದ ಅಕ್ಷರಕ್ಕೆ - ಬಂದನು, ಕಂದ, ಸಿಂಹ, ದಂಡ

ವಿಸರ್ಗ ಸೇರಿದ ಅಕ್ಷರಕ್ಕೆ - - ದುಃಖ, ಅಂತಃಕರಣ, ಅಂತಃಪುರ

ವ್ಯಂಜನ ಸೇರಿದ ಅಕ್ಷರಕ್ಕೆ - ಮರಗಳ್, ನುಡಿಯಲ್, ಜನಂಗಳ್

ಒತ್ತಕ್ಷರದ ಹಿಂದಿನ ಅಕ್ಷರಕ್ಕೆ - ಅಕ್ಕ, ಶಕ್ಯ, ವರ್ಗ, ಸದ್ವ್ಯಯ

ಪಾದಾಂತ್ಯಕ್ಕೆ - (ದ್ವಿಪದೀಪದ್ಯದ ಕಡೆಗೆ ಒತ್ತುಗೆರೆಯನ್ನು ಕೊಟ್ಟಿರುವುದು ದೀರ್ಘವಾಗಿ ಒಂದು ಗುರುವಿನಷ್ಟು ಉಚ್ಚರಿಸಲಾಗುತ್ತದೆ)

ಕಂಡೆಯಾ ಜನಕಸುತೆ ಕಡುವಿಚಿತ್ರಗಳ |
ದಂಡಕಾ ವನದೊಳಿಹ ಸಕಲ ವಸ್ತುಗಳ ||

*ಪದ್ಯದಲ್ಲಿ ಪ್ರತಿಯೊಂದು ಪಂಕ್ತಿಯು ಪಾದವೆನಿಸುವುದು. ಷಟ್ಪದಿ ಪದ್ಯಗಳಲ್ಲಿ ಮೂರನೆಯ ಮತ್ತು ಆರನೆಯ ಪಾದಗಳ ಅಂತ್ಯದ ಅಕ್ಷರಗಳು ಮಾತ್ರ ಪಾದಾಂತ್ಯಾಕ್ಷರಗಳೆಸುತ್ತವೆ. ಪಾದಾಂತ್ಯದ ಅಕ್ಷರವು ರೂಪದಲ್ಲಿ ಹ್ರಸ್ವವಾಗಿದ್ದರೂ ನಾವು ಎಳೆದು ಹಾಡುತ್ತೇವಷ್ಟೆ? ಆದುದರಿಂದ ಅವು ಗುರ್ವಕ್ಷರಗಳೇ ಆಗಿವೆ.

ಉದಾ: ಚೋರ ನಿಂದಿಸಿ ಶಶಿಯ ಬೈದೊಡೆ
ಕ್ಷೀರವನು ಕ್ಷಯರೋಗಿ ಹಳಿದರೆ
ವಾರಣಾಸಿಯ ಹೆಳವ ನಿಂದಿಸಿ ನಕ್ಕರೇನಹುದು ||

ವಿಕೃತ, ಸುಕೃತ- ಇತ್ಯಾದಿ ಋತ್ವದ ಒತ್ತು ಇರುವಲ್ಲಿ ಅದರ ಹಿಂದಿನ ಅಕ್ಷರವು ಗುರುವೆನಿಸದು. ಇದು ಒತ್ತಿನಂತೆ ಕಾಣಿಸುವುದಾದರು ಒತ್ತಲ್ಲ; ಸ್ವರ ಚಿಹ್ನೆ. ಬೆಳೆಗೈ ಎಂಬ ಶಬ್ದದಲ್ಲಿ ಐತ್ವವು ಸೇರಿದ 'ಗೆ' ಎಂಬುದು ಒತ್ತಕ್ಷರವಲ್ಲ; ಅದು ದೀರ್ಘಾಕ್ಷರ. 'ಕಾಂಕ್ಷೆ' ಎಂಬಲ್ಲಿ 'ಕಾಂ' ಎಂಬುದು ದೀರ್ಘವೂ ಬಿಂದು ಸೇರಿದುದೂ ಒತ್ತಕ್ಷರದ ಹಿಂದಿನದು ಆಗಿ, ಗುರ್ವಕ್ಷರವೆನಿಸುವ ಮೂರು ಲಕ್ಷಣಗಳಿಂದ ಕೂಡಿದ್ದರು ಅದು ಒಂದು ಗುರುವೆಂದು ಮಾತ್ರ ಲೆಕ್ಕಿಸಲ್ಪಡುವುದು. 'ಕಾಂಕ್ಷೆ' ಎಂಬ ಶಬ್ದಕ್ಕೆ ಮೂರು ಮಾತ್ರೆಗಳು. ಅವರ್ಗಳ್, ಎರ್ದ, ಪೊಗಳ್ವಪಂ, ಮರುಳ್ಗ್ಳ, ಅಮರ್ದು --ಇತ್ಯಾದಿ ಶಿಥಿಲೋಚ್ಚಾರಣೆಯ ಒತ್ತಕ್ಷರದ ಹಿಂದಿನ ಅಕ್ಷರವು ಒತ್ತಿನ ಕಾರಣದಿಂದ ಗುರುವೆನಿಸುವುದು. ಲಘುವಿನ ಉಚ್ಚಾರಣೆ ಒಂದು ಚಿಟಿಕೆಯ ಅಥವಾ ಕೈಚಪ್ಪಾಳೆಯ ಧ್ವನಿಯಲ್ಲಿ ಅಡಗುವುದು. ಗುರು ಅದರಲ್ಲಿ ಅಡಗದೆ ಎರಡು ಚಿಟಿಕೆಗಳು ಶಬ್ದವಾಗುವ ಕಾಲವನ್ನು ಒಳಗೊಳ್ಳುವುದು.

## ಗಣ:

ಗಣವೆಂದರೆ ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಗುಂಪು. ಅದು ವರ್ಣಗಣ, ಮಾತ್ರಾಗಣವೆಂದು ಎರಡು ವಿಧ.

ವರ್ಣಗಣ ನಿಯಮಕ್ಕೊಳಪಟ್ಟ ಛಂದಸ್ಸು ವರ್ಣವೃತ್ತವು. ಮಾತ್ರಾಗಣನಿಯಮಕ್ಕೊಳಗಾದ ಛಂದಸ್ಸು ಮಾತ್ರಾ ವೃತ್ತವೆನಿಸುತ್ತದೆ.

### ವರ್ಣಗಣ:

ಲಘುಗುರುವರ್ಣಗಳನ್ನು ಮೂರುಮೂರಾಗಿ ವಿಂಗಡಿಸಿದರೆ ಎಂಟುವರ್ಣಗಳಾಗುವುವು.

ಗುರುಲಘು ಮೂರಿರೆ ಮ-ನ-ಗಣ
ಗುರುಲಘು ಮೊದಲಲಿ ಬರಲು ಬ-ಯ-ಗಣಮಕ್ಕುಂ ||
ಗುರುಲಘು ನಡುವಿರೆ ಜ-ರ-ಗಣ
ಗುರುಲಘು ಕಡೆಯಲ್ಲಿ ಬರಲು ಸ-ತ-ಗಣಮಕ್ಕು||

ಲಘುಗುರು ವಿನ್ಯಾಸಗಣ ಉದಾಹರಣೆ:

ಮ ಗ ಣ ಓದಿಂದಂ, ಆನಂದಂ

ನ ಗ ಣ ಗುಣಮೆ, ಪಿರಿದು

ಭ ಗ ಣ ಬೀಣೆಯ, ಮೆಲ್ಲುಲಿ

ಯ ಗ ಣ ಕುಮಾರಂ, ಬಳಿಲದಂ

ಜ ಗ ಣ ಸುರಾಜ್ಯ, ಮದಿರ್ಕೆ

ರ ಗ ಣ ಭೂಮಿಪಂ, ಪಾಲಿಪಂ

ಸ ಗ ಣ ದಿಟಮೇ, ಜಯಿಕುಂ

ತ ಗ ಣ ಲೋಕೇಶ, ನೋಡೆನ್ನ

"ಯಮಾತಾರಾಜಭಾನಸಲಗಂ" ಇಂಬ ಸೂತ್ರದಲ್ಲಿ, ಕ್ರಮವಾಗಿ ಮೂರು ಮೂರಕ್ಷರಗಳನ್ನು ತೆಗೆದುಕೊಂಡರೆ ಮೊದಲನೆಯಕ್ಷರವು ಗಣದ ಹೆಸರನ್ನು ಸೂಚಿಸುವುದು.

## ಮಾತ್ರಾಗಣ:

ಮಾತ್ರಾಗಣವನ್ನು ಮಾತ್ರೆಗಳಿಂದ ತಿಳಿಯಬೇಕು. ಒಂದು ಲಘುವಿಗೆ ಒಂದು ಮಾತ್ರೆಯೆಂದೂ, ಒಂದು ಗುರುವಿಗೆ ಎರಡು ಮಾತ್ರೆಗಳೆಂದೂ ಸಂಕೇತವು. ಮಾತ್ರೆಗಳನ್ನು ಮೂರು ನಾಲ್ಕು ಐದಾಗಿ ವಿಂಗಡಿಸುವುದರಿಂದ ಮಾತ್ರಾಗಣವು ಸಾಮಾನ್ಯವಾಗಿ ಮೂರು ವಿಧವು.
ಇವುಗಳಲ್ಲಿ-

೧) ಮೂರು ಮಾತ್ರೆಯ ಗಣವು ಮೂರು ವಿಧ

ಲಘುಗುರು ವಿನ್ಯಾಸ ಉದಾಹರಣೆ

ನಿನಗೆ ಸೊಗಮೆ
ಕೀರ್ತಿ ನಿಲ್ಕೆ
ಮರಂ ಜಡಂ

೨) ನಾಲ್ಕು ಮಾತ್ರೆಯ ಗಣವು ಐದು ವಿಧ

ನರಪತಿ ನಿರುಕಿಸು
ನಾಡಿನ ವಿಳ್ಗೆಯ
ಜನಕ್ಕೆ ವಿಶೇಷ
ಧನಮುಂ ಸುಖಮುಂ
ಎಂದುಂ ಬೇಳ್ಕಂ

೩) ಐದು ಮಾತ್ರೆಯ ಗಣವು ಎಂಟು ವಿಧ.

ಜಗದೊಡೆಯ ಕರುಣಿಸುತೆ
ನೀನೆಮಗೆ ನಿತ್ಯಸುಖ
ಮೆನಿಪ್ಪುದು ಅದಾವುದೊ
ಆದನಿತ್ತು ಪೊರಿಯೆನ್ನು
ನಿನಗೆ ನಾಂ ಮೊರೆಯಿಡು
ತಿರ್ದಪ್ಪೆ ವೇಕಾಗ್ರ

ಮನಸ್ಕ ರ್ಮಹೇಶಾ
ರಕ್ಷಿಸ್ಯೈ ರಕ್ಷ್ಯರಂ

ಒಂದು ಗುರುವಿನ ಎರಡು ಮಾತ್ರೆಗಳನ್ನು ಬೇರೆ ಬೇರೆ ಮಾತ್ರಾಗಣಗಳಿಗೆ ಹಂಚಕೂಡದು. "ಗುಣಮೊಳ್ಳಿತು' ಎಂಬಲ್ಲಿ "ಮೊ"ವಿನ ಎರಡು ಮಾತ್ರೆಗಳಲ್ಲಿ ಒಂದನ್ನು ಹಿಂದಕ್ಕೂ ಇನ್ನೊಂದನ್ನು ಮುಂದಕ್ಕೂ ಸೇರಿಸಿ ಮೂರು ಮಾತ್ರೆಗಳ ಎರಡು ಗಣಗಳೆಂದು ಗಣಿಸಲಾಗದು. ಹೀಗೆಯೇ "ಚಂದನಂಗಳಂ, ಪಟ್ಟಣಮೇ ನೆಸೆದುದೊ" ಎಂಬಲ್ಲಿ ಅನುಕ್ರಮವಾಗಿ ಚತುರ್ಮಾತ್ರಾಗಣಗಳೆರಡೂ, ಪಂಚ ಮಾತ್ರಾಗಣಗಳೆರಡೂ ಇರುವುವೆಂದು ಭಾವಿಸಲಾಗದು; ಮತ್ತು "ದೇವನಾವಂ' ಎಂಬಲ್ಲಿ "ನಾ"ವಿನ ಎರಡು ಮಾತ್ರೆಗಳಲ್ಲಿ ಒಂದನ್ನು ಹಿಂದಕ್ಕೂ ಮತ್ತೊಂದನ್ನು ಮುಂದಕ್ಕೂ ಸೇರಿಸಿ ಒಂದೊಂದು ಚತುರ್ಮಾತ್ರಾಗಣವೂ ತ್ರಿಮಾತ್ರಾಗಣವೂ ಆಯಿತೆಂದು ತಿಳಿಯಬಾರದು. ಅಚ್ಚಗನ್ನಡ ಛಂದಸ್ಸಿನಲ್ಲಿ "U-U" ಈ ಗಣವೂ, ಈ ಗಣದಿಂದ ಆರಂಭವಾಗುವ ಗಣಗಳೂ ಅಪೂರ್ವ.

## ಪ್ರಾಸ:

ಪದ್ಯದ ಸಾಲಿನಲ್ಲಿ ಒಂದೇ ಬಗೆಯ ವ್ಯಂಜನ-ಸ್ವರಗಳು ಪುನರಾವರ್ತನೆಯಾದರೆ ಅದನ್ನು ಪ್ರಾಸವೆಂದು ಕರೆಯಲಾಗುತ್ತದೆ. ಕೆಲವು ನಿರ್ದಿಷ್ಟಸ್ಥಾನಗಳಲ್ಲಿ ಸ್ವರ-ವ್ಯಂಜನಗಳ ಪುನರಾವರ್ತನೆಯನ್ನು ಅಪೇಕ್ಷಿಸಿದಾಗ ವಿವಿಧ ಬಗೆಯ ಪ್ರಾಸಗಳಾಗುತ್ತವೆ. ಅವುಗಳಲ್ಲಿ ಮುಖ್ಯವಾದವು – ಆದಿಪ್ರಾಸ, ಅನುಪ್ರಾಸ ಮತ್ತು ಅಂತ್ಯಪ್ರಾಸ.

### ಆದಿಪ್ರಾಸ:

ಪದ್ಯದ ಪ್ರತಿಪಾದದಲ್ಲಿಯೂ ಆದಿಯಲ್ಲಿ ಒಂದೆರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನವಿರುವುದು ಪ್ರಾಸದ ಸಾಮಾನ್ಯ ಲಕ್ಷಣವು. ಇದರಲ್ಲಿ ಸಿಂಹ ಮುಂತಾದ ಆರು ಭೇದಗಳಿವೆ.

೧) ಪ್ರತಿಪಾದದ ಒಂದೆರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ಒಂದು ವ್ಯಂಜನವು ಬಂದು ಅದರ ಹಿಂದಿನ ಸ್ವರವು ಹ್ರಸ್ವವಾಗಿದ್ದರೆ ಸಿಂಹಪ್ರಾಸ. ದೀರ್ಘವಾಗಿದ್ದರೆ ಗಜಪ್ರಾಸ.

ಸಿಂಹ: ಗಿರಿಗಳ್ ಪರಮಾಣುಗಳೆನೆ
ಸರೋಜಭವನೀ ಕರೀನ್ದ್ರಮಂ ಮಾಡಿದನೆಂ||
ದಿರದಿದರ ಕಾಯಬಲಮಂ
ನಿರೂಪಿಸಲ್ ನಾಗರಾಜನಂ ನೆಱೆದಪನೇ||

--ಪಂಪರಾಮಾಯಣ

ಗಜ: ಮಾಸು ಮುಸುಂಕೆ ತಾಯೊಡಲೊಳೆಂತಿರವರ್ಪುದು ಮೂತ್ರಮಾರ್ಗದೊಳ್
ಹೇಸದೆ ಬರ್ಪುದೆಂತು ಮಲಮೂತ್ರದೊಳಾಱುತೇಱುತುಂ||
ಕೂಸೆನಿಸಿರ್ಪುದೆಂತುಟದನಾಂ ಮಱೆದಾಗಳೆ ಟಕ್ಕುಜೌವನಂ|
ಸಾಸದಮೆಂದು ನಚ್ಚಿದೆನಲಾ ಮತಿದೋಱಪರಾಜಿತೇಶ್ವರಾ||

--ಅಪರಾಜಿತೇಶ್ವರಶತಕ

೨) ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ಒಂದು ವ್ಯಂಜನಕ್ಕಾಗಲಿ, ಅನೇಕ ವ್ಯಂಜನಗಳಿಗಾಗಲಿ ಹಿಂದೆ ಅನುಸ್ವಾರವಿರಲು ವೃಷಭಪ್ರಾಸ ವಿಸರ್ಗವಿರಲು ಅಜಪ್ರಾಸ.

ವೃಷಭ: ಒಂದು ವ್ಯಂಜನಕ್ಕೆ:

ಕಂಸವಧಂಗೆಯ್ದ ಮುರ
ಧ್ವಂಸಿಗೆ ಪೂಜಾರ್ಥಮೆಂದು ಮಾರುತ ಕೊಟ್ಟಿಂ||
ನೀಂ ಸಭೆಯಂ ಕೊಣ್ಡುಯ್ವುದಿ
ದಂ ಸಲಿಸಿದೆನೆಂದು ವಜ್ರಿ ನುಡಿವುದುಮಾಗಳ್||

--ಜಗನ್ನಾಥವಿಜಯ

ಎರಡು ವ್ಯಂಜನಕ್ಕೆ:

ಸಂಗ್ರಹಣಶೀಲಮನುಜನ
ವಂಗ್ರಹಯಾಳುವೆನಿಸಿರ್ಕುಮೀ ಜನತತಿಯೊಳ್||

ಅಜ: ಒಂದು ವ್ಯಂಜನಕ್ಕೆ:

ಅಃಪೂರೆವನಿವನೆ ಪರಮು
ಶಃಪಾತ್ರನೆನಲ್ಕೆ ಜನಮನಿನಿಸಲಸದೆಯುಂ||
ಅಃಪೇಱಲದೇನಿವನಿಂ
ಸ್ವಃಪದವಾಚ್ಯಂ ಸಮಂತುಮೆಱೆವೀದೇಶಂ||

ಎರಡು ವ್ಯಂಜನಗಳಿಗೆ:

ಆಃಪ್ರಥಮನನುಱಿದಿಂತಯ
ಶಃಪ್ರಾರ್ಥನೆಯಿಂದೆ ಗೆಯ್ವುದುಚಿತಮೆ ನಿನಗಂ||

೩) ಪ್ರತಿಪಾದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ವಿಜಾತೀಯ ಸಂಯುಕ್ತ ವ್ಯಂಜನಗಳು ಬಂದು ಅವುಗಳ ಹಿಂದೆ ಅನುಸ್ವಾರ ವಿಸರ್ಗಗಳಿಲ್ಲದಿರಲು ಶರಭಪ್ರಾಸವಾಗುವುದು.

ಶರಭ: ಎರಡು ವ್ಯಂಜನಗಳ ಸಂಯೋಗಳ ಸಂಯೋಗಕ್ಕೆ:

ಆಕ್ಷಣದೊಳ್ ಪರಸ್ಪರನಿರೀಕ್ಷಣದಿಂ ಮುಳಿಸುಳಿಸುಣ್ಮಿ ಪೊಣ್ಮಿರ
ಕ್ತೇಕ್ಷಣರಾತ್ಮಶಕ್ತಿಗೆ ಶರೀರಬಲಕ್ಕನುರೂಪಮಪ್ಪುದಂ||
ಲಕ್ಷಣಯುಕ್ತಮಪ್ಪ ಗದೆಯಂ ತಳೆದಿರ್ವರುಮಿರ್ವಲಂ ಬಿಗು
ರ್ತೀಕ್ಷಿಸಿ ಮೀಱಿದರ್ ವಿಕಟಶೃಂಗಸಮಗ್ರಕುಲಾಚಲಂಗಳಂ||

-ಪಂಪರಾಮಾಯಣ

೪) ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ಸಜಾತೀಯ ಸಂಯುಕ್ತ ವ್ಯಂಜನಗಳು ಬರಲು ಹಯಪ್ರಾಸವೆನಿಸುವು.

ನಿನ್ನನೆ ನಚ್ಚಿದಂ ಕುರುಮಹೀಪತಿ ನಿನ್ನ ಶರಾಳಿಗಳೆ ಮು

ನ್ನನ್ನಡುಗುತ್ತು ಮಿರ್ಪುದರಿಸಾಧನಸಂಪದಮಂತೆ ಶಸ್ತ್ರಸಂ||
ಪನ್ನನೆ ಆಗಿ ಶಲ್ಯನನೆ ಸಾರಥಿಯಾಗಿರೆ ಮಾಡಿ ಕಾದು ನೀಂ
ನಿನ್ನಯ ಬಲ್ಲ ಮಾಱಿಕ್ಕೆಯೊಳಿದಂ ನಿನಗಂಗವಲ್ಲಭಾ||

-ಪಂಪಭಾರತ

### ಅನುಪ್ರಾಸ:

ಪ್ರಾಸಸ್ಥಾನವು ನಿಗದಿಯಾಗದೆ ಸಾಲಿನಲ್ಲಿ ನಿರ್ದಿಷ್ಟ/ಅನಿರ್ದಿಷ್ಟ ಅಂತರದಲ್ಲಿ ಸ್ವರ-ವ್ಯಂಜನವು ಪುನರಾವರ್ತಿಸಿದರೆ ಅದು ಅನುಪ್ರಾಸವಾಗುತ್ತದೆ. ಇದು ಹೆಚ್ಚು ಪ್ರಯತ್ನವಿಲ್ಲದೆಯೇ, (ಕವಿಯ ಇಚ್ಛೆಗನುಸಾರವಾಗಿ ತರಬಹುದಾದ್ದರಿಂದ) ಪ್ರಯೋಗಿಸಬಹುದಾದ ಮತ್ತು ಅತಿ ಸೌಂದರ್ಯವನ್ನು ಕೊಡುವ ಪ್ರಾಸ.

ಉದಾಹರಣೆ:

ನಿತಾಂತಕಾಂತದಂತಕಾಂತಿದಂತಕಾಂತಕಾಂತ್ರಜಂ ||

### ಅಂತ್ಯ ಪ್ರಾಸ:

ಇದರಲ್ಲಿ ಕಡೆಯ ವ್ಯಂಜನದ ಮೇಲಿನ ಸ್ವರ ಒಂದೇ ಆಗಿ, ಹಿಂದೆ ದೀರ್ಘ ಹ್ರಸ್ವಗಳಲ್ಲಿ ಸಾಮ್ಯವಿರಬೇಕು. ಕೂಡಿ ಎಂಬುದಕ್ಕೆ ನೋಡು-ಕುಡಿ-ಎಂಬುದು ಪ್ರಾಸವಲ್ಲ. ನಾಗವರ್ಮನು ಹೇಳಿರುವ ಅನುಗತಾದಿ ಪ್ರಾಸಗಳು ಇಲ್ಲಿ ಮೇಲೆ ಹೇಳಿದ ಸಿಂಹಾದಿ ಪ್ರಾಸಗಳಂತೆ ಇರಲೇಬೇಕೆಂದು ನಿಯಮಿಸಿ ಹೇಳಲಾಗುವುದಿಲ್ಲವಾದುದರಿಂದಲೂ ಶಬ್ದಾಲಂಕಾರವಾಗಿ ಕಾಣುವುದರಿಂದಲೂ ಅವು ಛಂದಶ್ಶಾಸ್ತ್ರವಿಚಾರಕ್ಕೆ ವಿಷಯವಲ್ಲ.

ತುಂಬಿವಿಂಡಿನಂತೆ ಪಾಡಿ|
ಜಕ್ಕವಕ್ಕಿಯಂತೆ ಕೂಡಿ||
ದೆಸೆಯನಿಚ್ಚೆಯಿಂದೆ ನೋಡಿ|
ಸೊಗಯಿಪಂಚೆಯಂತಿರಾಡಿ||

-ಕಬ್ಬಿಗರ ಕಾವ

### ಯತಿ:

ಯತಿಯೆಂದರೆ ಪದ್ಯಗಳನ್ನು ಓದುವಾಗ ಅರ್ಥಸ್ಫೂರ್ತಿ ಕೆಡದಂತೆ ಪದ್ಯಪಾದದ ನಿಯತವಾದ ಒಂದೊಂದೆಡೆಯಲ್ಲಿ ನಿಲ್ಲಿಸುವುದು. ಹಾಗೆ ನಿಲ್ಲಿಸುವುದು ಪದದ ಮಧ್ಯದಲ್ಲಿಯಾದರೆ ಅರ್ಥಸ್ಫೂರ್ತಿ ಕೆಡುವುದರಿಂದ ಪದದ ಕೊನೆಯಲ್ಲಿಯೇ ನಿಲ್ಲಿಸಬೇಕು. ಕನ್ನಡದಲ್ಲಿ ಯತಿಯು ಕೆಲವೆಡೆಯಲ್ಲಿ ಮಾತ್ರ ತೋರಬಹುದಲ್ಲದೆ ಸಂಸ್ಕೃತದಲ್ಲಿರುವಂತೆ ಎಲ್ಲಾ ಕಡೆಯಲ್ಲಿಯೂ ನಿಯತವಾಗಿ ತೋರುವುದಿಲ್ಲ. ಹಾಗೆ ತೋರದಿರುವುದಕ್ಕೆ ಇಲ್ಲಿ ಕೆಲವು ಉದಾಹರಿಸಲ್ಪಡುವುವು. ಈ ಉದಾಹರಣೆಗಳಲ್ಲಿ ಆಯಾ ವೃತ್ತದ ಲಕ್ಷಣದಲ್ಲಿ ಹೇಳಿರುವಂತೆ ಯತಿಯ ಸ್ಥಳವನ್ನು "*" ಈ ಚಿಹ್ನೆಯಿಂದ ತೋರಿಸಿದೆ. ಈ ಸ್ಥಳಗಳಲ್ಲಿ ನಿಲ್ಲಿಸುವುದರಿಂದ ಅರ್ಥಸ್ಫೂರ್ತಿ ಕೆಡುವುದು.

**ಮಾಲಿನೀವೃತ್ತ:**

ಅಮಲಕನಕದುದ್ *ದ್ವೇದಿಸುತ್ತಿರ್ಪುದೊಪ್ಪು*

ತ್ರಮೆ ರಜಚುತುದ್ವಾ*ರಂಗಳಿಂ ಮಗಳಾದ್ಯ*

ತ್ರಮನವನಿಧಿ........

-ಶಾನ್ತೀಶ್ವರ ಪುರಾಣ

**ಹರಿಣೀವೃತ್ತ:**

ಗ್ರಥಿತಪದಪೀ*ಠಾಗ್ರಂಕೇಯೂ*ರಮಂ ತಳೆವಂದದಿಂ

-ಕಾದಂಬರಿ

**ಪೃಥ್ವೀವೃತ್ತ:**

ಧರಾವಿವರರ್ತಿಶೇ*ಷನಿಳೆಯಂ ಗಡಂ ತಾಳ್ದಿಯಂ|

ವಿರುದ್ಧಮೆನೆ ರಾಷ್ಟ್ರಕಂ*ಟಕರನೆಯ್ದೆ ಕಿಱ್ತಂ ನೃಪಂ||

-ಮಲ್ಲಿನಾಥಪುರಾಣ

**ಮಂದಾಕ್ರಾಂತವೃತ್ತ:**

.....ನಯನಸುಖಮಂ ಮಾಡೆ ಬಂದರ್ಘ್ಯಮಂ ಯ*|

ಕ್ಷಂ ಕೊಟ್ಟಂರಾ*ಘವನ ಚರಣ*ಕ್ಕಿನ್ನರಾರ್ ಧನ್ಯಜನ್ಮರ್|

-ಪಂಪರಾಮಾಯಣ

**ಶಾರ್ದೂಲವಿಕ್ರೀಡಿತ:**

ಆಕಾಶಾನ್ತಮನೆಯ್ದೆ ನೀಳ್ದ ವಿಕಟಾ*ಟ್ಟಾಲಂಗಳೊಳ್ ಕೇತನಾ*|

ನೀಕಂಗಳ್ ರವಿರಶ್ಮಿಗಳ್ ಪುಗಲೆವೇ*ಡೀರಶ್ಮಿಗಳ್ ಸಾಲ್ಗುಮಿಂ*||

ತೇಕಜ್ಜಂ ಬೆಳಗೆಂಬವೊಲ್ ತುಱುಗಿ ತ*ಳ್ತಿಂಬಪ್ಪಿನಂ ಕಾಂಚನ|

ಪ್ರಕಾರಂ....

-ಆದಿಪುರಾಣ

ಹೀಗೆ ಇನ್ನೂ ಅನೇಕ ಮಹಾಕವಿಗ್ರಂಥಗಳಲ್ಲಿಯೂ ಆಯಾ ಲಕ್ಷಣಕ್ಕನುಸಾರವಾಗಿ ಯತಿಯು ಕಾಣುವುದಿಲ್ಲ. ಆದುದರಿಂದಲೇ

.....ಪೂರ್ವಾಚಾರ್ಯರ್

ದೇಸಿಯೆನೆ ನಿಱಿಸಿ ಖಂಡ

ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್||

-ಕವಿರಾಜಮಾರ್ಗ

ಎಂದು ನೃಪತುಂಗನೂ:

ಯತಿಯೆಂಬುದು ಗಣನಿಯಮ
ಪ್ರತೀತಮೆಂದರೆಬರೊಲ್ವರಂತದನೆ ಕೆಲರ್||
ಶ್ರುತಿಸುಭಗಂ ಸ್ವಚ್ಛಂದಂ
ಯತಿಯೆಂದಾ ಕಪಿಲಪಿಂಗಾಳಾದಿಗಳೊಲ್ಲರ್||

-ಛಂದೋಂಬುಧಿ

ಎಂದು ನಾಗವರ್ಮನೂ;

ಯತಿವಿಲಂಘನದಿಂದರಿದಲ್ತೆ ಕನ್ನಡಂ

-ಶಬ್ದಮಣಿದರ್ಪಣ

ಎಂದು ಕೇಶಿರಾಜನೂ ಕನ್ನಡದ ಯತಿಯ ವಿಷಯವಾದ ತಮ್ಮ ಅಭಿಪ್ರಾಯವನ್ನು ತಿಳಿಸಿರುವರು. ಇದರಿಂದ ಕನ್ನಡದಲ್ಲಿ ಯತಿಯು ಐಚ್ಛಿಕವಾಗಿರುವುದೇ ಹೊರತು ನಿಯತವಾಗಿಲ್ಲವೆಂದು ಹೇಳಬಹುದು. ಸಂಸ್ಕೃತದಿಂದ ಬಂದ ವೃತ್ತಗಳಲ್ಲಿ ಯತಿಯು ಐಚ್ಛಿಕವಾದರೂ ತ್ರಿಪದಿ ಮುಂತಾದ ಕನ್ನಡವೃತ್ತಗಳಲ್ಲಿ ಯತಿ ನಿರ್ಬಂಧವೇ ಸರಿ.

ಉದಾ: ಸಜ್ಜನರ ಸಂಗವದು*ಹೆಜ್ಜೇನು ಸವಿದಂತೆ.

ಇಲ್ಲಿ ಪ್ರಾಸವೇ ಯತಿಯನ್ನು ಎತ್ತಿ ತೋರಿಸುವುದು.

## ಕೆಲವು ಛಂದಃ ಪ್ರಕಾರಗಳ ಲಕ್ಷಣಗಳು:

### ಮಾತ್ರಾವೃತ್ತಗಳು

ಕವಿಗಳು ಇಚ್ಛಾನುಸಾರವಾಗಿ ಹೊಸಹೊಸ ಮಾತ್ರಾವೃತ್ತಗಳನ್ನು ರಚಿಸಿರುವರು. ಹಾಗೆ ಇನ್ನೂ ಅನೇಕ ವಿಧವಾಗಿ ರಚಿಸಲೂಬಹುದು. ಇಲ್ಲಿ ಪ್ರಸಿದ್ಧವಾಗಿರುವ ಕೆಲವು ಮಾತ್ರಾವೃತ್ತಗಳಿಗೆ ಮಾತ್ರ ಲಕ್ಷಣೋದಾಹರಣೆಗಳು ತಿಳಿಸಲ್ಪಡುವುವು.

### *ಕಂದ:*

ಚತುರ್ಮಾತ್ರಾಗಣವು ಒಂದು ಮೂರನೆಯ ಪಾದಗಳಲ್ಲಿ ಮೂರು ಮೂರು, ಎರಡು ನಾಲ್ಕನೆಯ ಪಾದಗಳಲ್ಲಿ ಐದೈದೂ ಇರಬೇಕು. ಪೂರ್ವೋತ್ತರಾರ್ಧಗಳ ವಿಷಮಸ್ಥಾನಗಳಲ್ಲಿ ಮಧ್ಯಗುರುವುಳ್ಳ ಗಣಗಳು ಬರಕೂಡದು. ಆರನೆಯ ಸ್ಥಾನದಲ್ಲಿ (U-U) ಜ ಗಣವಾಗಲಿ ನಾಲ್ಕು ಲಘುವುಳ್ಳ(UUUU) ಗಣವಾಗಲಿ ಬಂದು ಮೊದಲಿನ ಹ್ರಸ್ವದ ಮುಂದೆ ಯತಿ ಇರಬೇಕು. ಎಂಟನೆಯ ಗಣಸ್ಥಾನಗಳಲ್ಲಿ ಅಂತ್ಯ ಗುರುವುಳ್ಳ (UU-, --)ಗಣಗಳೇ ಬರಬೇಕು.

ಇರದೊಯ್ವುದು ತನ್ನಿಚ್ಚೆಗೆ|
ಮರಯೌವನದಂದು ಪುರುಷನಂ ಪ್ರಕೃತಿ ರಜಂ||
ಬೊರೆದು ತಿರಿಪುತ್ತೆ ಸುಟ್ಟುಱಿ|
ತೆರಳ್ಚಿ ತಱಗೆಲೆಯನುಯ್ವ ತೆಱದಿಂದೆತ್ತಂ||
-ಕಾದಂಬರಿ

### ಷಟ್ಪದಿ:

ಇದು ಆರು ಪಾದಗಳುಳ್ಳ ಮಾತ್ರಾವೃತ್ತವು. ಇದರಲ್ಲಿ ಒಂದೆರಡು ನಾಲ್ಕೈದನೆಯ ಪಾದಗಳು ಸಮಾನಗಳಾಗಿಯೂ, ಮೂರಾರನೆಯ ಪಾದಗಳು ಮಿಕ್ಕ ಪಾದದ ಒಂದೂವರೆಯಷ್ಟು ಗಣಗಳೂ ಒಂದು ಗುರುವೂ ಉಳ್ಳುವಾಗಿಯೂ ಇರುವುವು. ಇದು ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ, ಎಂದಾರು ವಿಧವು.

### ಶರಷಟ್ಪದಿ

ನಾಲ್ಕು ಮಾತ್ರೆಯ ಗಣವು ಒಂದೆರಡು ನಾಲ್ಕೈದನೆಯ ಪಾದಗಳಲ್ಲಿ ಎರಡೆರಡೂ, ಮೂರಾರನೆಯ ಪಾದಗಳಲ್ಲಿ ಮೂರು ಮೂರೂ ಒಂದು ಗುರುವೂ ಇರಲು ಶರಷಟ್ಪದಿಯೆನಿಸುವುದು. 'U-U' ಈ ಗಣವು ಬರಕೂಡದು.

ಈಶನ ಕರುಣೆಯ
ನಾಶಿಸು ವಿನಯದಿ
ದಾಸನ ಹಾಗೆಯೆ ನೀ ಮನವೇ|
ಕ್ಲೇಶದ ವಿಧವಿಧ
ಪಾಶವ ಹರಿದು ವಿ
ಲಾಸದಿ ಸತ್ಯವ ತಿಳಿ ಮನವೇ||

### ಕುಸುಮ ಷಟ್ಪದಿ:

ಆಯ್ದು ಮಾತ್ರೆಯ ಗಣವು ಒಂದೆರಡು ನಾಲ್ಕೈದನೆಯ ಪಾದಗಳಲ್ಲಿ ಎರಡೆರಡೂ, ಮೂರಾರನೆಯ ಪಾದಗಳಲ್ಲಿ ಮೂರು ಮೂರೂ ಒಂದು ಗುರುವೂ ಇರಲು ಕುಸುಮಷಟ್ಪದಿಯಾಗುವುದು. , 'U-UU', 'U--' ಈ ಗಣಗಳು ಬರಕೂಡದು.

ನಾಡು ಮನಸಿಜನೊಲವಿ
ನಾಡುವೆಡೆ ಸಂತತಂ
ಬೀಡು ರತಿಪತಿಗೆ ಸತತನಿಧಾನವು||
ನೋಡಿದನಿಮಿಷಪತಿಗೆ
ಮಾಡುವುದು ವಿನಯವನು
ನಾಡಾಡಿಯವರ್ಗೆ ಬಣ್ಣಿಸಲು ಮೊಗ್ಗೇ||
-ಕುಮುದೇಂದುರಾಮಾಯಣ

### ಭೋಗಷಟ್ಪದಿ:

ಮೂರುಮಾತ್ರೆಯ ಗಣವು ಒಂದೆರಡು ನಾಲ್ಕೈದನೆಯ ಪಾದಗಳಲ್ಲಿ ನಾಲ್ಕು, ನಾಲ್ಕೂ ಮೂರಾರನೆಯ ಪಾದಗಳಲ್ಲಿ ಆರಾರೂ ಒಂದು ಗುರುವೂ ಬರಲು ಭೋಗಷಟ್ಪದಿಯಾಗುವುದು. U-' ಈ ಗಣವು ಬರಕೂಡದು.

ಮೆಱೆಯುತಿದ್ದ ಭಾಗ್ಯವೆಲ್ಲ
ಹಱಿದುಹೋಯಿತೆನುತ ತಿರುಕ
ಮರಳಿ ನಾಚಿ ಪೋಗುತಿದ್ದ ಮರುಳನಂತೆಯೇ||
ಧರೆಯ ಭೋಗವನ್ನು ಮೆಚ್ಚಿ
ಪರವ ಮಱೆತು ಕೆಡಲುಬೇಡ
ಧರೆಯ ಭೋಗ ಕನಸಿನಂತೆ ಕೇಳು ಮಾನವಾ||
-ಮುಪ್ಪಿನ ಷಡಕ್ಷರಿಯ ವಚನ

### ಭಾಮಿನೀ ಷಟ್ಪದಿ:

ಮೂರುಮಾತ್ರೆಯ ಗಣದ ಮುಂದೆ ನಾಲ್ಕು ಮಾತ್ರೆಯ ಗಣವು ಬರುವ ಹಾಗೆ ಈ ಗಣಗಳು ಒಂದೆರಡು ನಾಲ್ಕೈದನೆಯ ಪಾದಗಳಲ್ಲಿ ಎರಡೆರಡೂ, ಮೂರಾರನೆಯ ಪಾದಗಳಲ್ಲಿ ಮೂರೂ ಮೂರೂ ಒಂದು ಗುರುವೂ ಇರುವುದು ಭಾಮಿನೀಷಟ್ಪದಿಯೆನಿಸುವುದು. ಇದರಲ್ಲಿ , 'U-', 'U-U' ಈ ಗಣಗಳು ಬರಲಾಗದು.

ಕೇಳು ಜನಮೇಜಯಧರಿತ್ರೀ
ಪಾಲ ಕೌರವನೃಪನ ತಂದು ಕೃ
ಪಾಳುವಿನ ಚರಣಾಗ್ರದಲಿ ಕೆಡಹಿದನು ಕಲಿ ಪಾರ್ಥ||
ತೋಳ ಹಿಂಗಟ್ಟುಗಳ ಮೋರೆಯ
ಕಾಳಿಕೆಯ ಬಿಡುದಲೆಯ ನೀರೊರೆ
ವಾಲಿಗಳ ಕುರುಭೂಪನಿದ್ದನು ತಮ್ಮದಿರು ಸಹಿತ||

-ಕುಮಾರವ್ಯಾಸ ಭಾರತ

### ಪರಿವರ್ಧಿನೀ ಷಟ್ಪದಿ:

ಚತುರ್ಮಾತ್ರಾಗಣವು ಒಂದೆರಡು ನಾಲ್ಕೈದನೆಯ ಪಾದಗಳಲ್ಲಿ ನಾಲ್ಕು ನಾಲ್ಕೂ, ಮೂರಾರನೆಯ ಪಾದಗಳಲ್ಲಿ ಆರಾರೂ ಒಂದು ಗುರುವೂ ಬಂದರೆ ಪರಿವರ್ಧಿನೀ ಷಟ್ಪದಿಯಾಗುವುದು. ಇದರಲ್ಲಿ 'U-U' ಈ ಗಣವು ಬರಕೂಡದು.

ದುರಿತವನಂ ಬೆಳೆವುದೆ ಪೊಲಲಂ ಕೊಲೆ
ಪರಕಲಿಸಿದ ನವದೋಹಳಮನೃತಂ
ಪರಿಕಾಲುದಕಮದಕೆ ಕಳವನ್ಯಸ್ತ್ರೀಸಂಗಮೆ ಗೆಯ್ಮೆ||
ಪರಿರಕ್ಷಣೆಯತಿಕಾಂಕ್ಷೆಯದರ್ಜನವು
ನಿರುತಂ ಪೊರ್ದದೊಡಿಲ್ಲಂ ಸಂಸೃತಿ
ಯುರುಕಿಲ್ಬಿಷಮೆಲ್ಲಿಯದು ವಿಚಾರಿಸೆ ಭವ್ಯಜನೋತ್ತಂಸಾ||

-ಜಯನೃಪಕಾವ್ಯ

### ವಾರ್ಧಕಷಟ್ಪದಿ:

ಪಂಚಮಾತ್ರಾಗಣವು ಒಂದೆರಡು ನಾಲ್ಕೈದನೆಯ ಪಾದಗಳಲ್ಲಿ ನಾಲ್ಕು ನಾಲ್ಕೂ, ಮೂರಾರನೆಯ ಪಾದಗಳಲ್ಲಿ ಆರಾರೂ ಒಂದು ಗುರುವೂ ಇದ್ದರೆ ವಾರ್ಧಕ ಷಟ್ಪದಿಯಾಗುವುದು. ಇದರಲ್ಲಿ , 'U-UU', 'U--' ಈ ಗಣಗಳು ಬರಲಾಗದು.

ಕೆತ್ತ ಬಲ್ಗತ್ತಲೆಗೆ ತರಣಿ ಮುಂಗಾಣ್ಬಿರೆ
ಪೊತ್ತುವೆಳಗಂ ಬೇರೆ ತೋರ್ಪರಾರ್ ಬಿಡದೆ ಘು
ರ್ಮೊತ್ತುರಕೆ ಮಾರುತಂ ಬೆಮರ್ದೊಡಾರ್ ಬೀಸುವರ್ ಬಳಿಕಾಲವಟ್ಟದಿಂದಂ|
ಕೃತ್ರಿಮದ ವಿಷದ ಸೋಂಕಿಗೆ ಗರುಡನಳವಳಿಯೆ
ಮತ್ತೆ ರಕ್ಷೆಗೆ ಮಂತ್ರಿಸುವರಾರು ಭೂಪನೀ
ನೊತ್ತುವನುತಾಪಕೆಡೆಗೊಟ್ಟೊಡಾರ್ ಬಿಡಿಸುವರ್ ಪೇಳೆಂದನಾ ಮುನಿಪನು||

-ಜೈಮಿನಿಭಾರತ

## *ರಗಳೆ*

ಸಮಾನವಾದ ಮಾತ್ರಾಗಣಗಳುಳ್ಳ ಬಹುಪಾದಗಳಿಂದ ಕೂಡಿದ ವೃತ್ತವು ರಗಳೆಯೆನಿಸುವುದು. ಇದರಲ್ಲಿ ಪ್ರಾಸವು ಇತರ ವೃತ್ತಗಳಲ್ಲಿರುವಂತೆ ನಿಯತವಾದ ಸ್ಥಾನದಲ್ಲಿರುವುದಿಲ್ಲ. ಒಂದೇ ಪಾದದಲ್ಲಿಯಾಗಲಿ, ಅನೇಕ ಪಾದಗಳಲ್ಲಿಯಾಗಲಿ; ಪಾದದ ಆದಿ ಮಧ್ಯಗಳಲ್ಲಿಯಾಗಲಿ, ಮಧ್ಯಾಂತಗಳಲ್ಲಿಯಾಗಲಿ, ಆದ್ಯಂತಗಳಲಿಯಾಗಲಿ; ಪ್ರಾಸಾಕ್ಷರವು ಒಂದೇ ಆಗಲಿ, ಅನೇಕವಾಗಲಿ- ಈ ರೀತಿ ಯಥೇಷ್ಟವಾಗಿರುವುದು. ಉತ್ಸಾಹ, ಮಂದಾನಿಲ, ಲಲಿತ ಎಂದು ಮೂರು ವಿಧವಾದ ರಗಳೆಗಳು ಪ್ರಸಿದ್ಧವಾಗಿರುವುವು.

## ಉತ್ಸಾಹರಗಳೆ

ಪಾದವೊಂದಕ್ಕೆ ತ್ರಿಮಾತ್ರೆಯ ನಾಲ್ಕು ಗಣಗಳಾಗಲಿ, ಮೂರು ಗಣಗಳೂ ಒಂದು ಗುರುವೂ ಆಗಲಿ ಇರಲು ಅದು ಉತ್ಸಾಹರಗಳೆಯೆನಿಸುವುದು. ನಾಗವರ್ಮನು (ಎರಡು ಸಾಲುಗಳನ್ನು ಒಂದಾಗಿ ಭಾವಿಸಿ) ಪಾದವೊಂದಕ್ಕೆ ಇಪ್ಪತ್ತುನಾಲ್ಕು ಮಾತ್ರೆಗಳಿರಬೇಕೆನ್ನುವನು.

**ಒಂದನೆಯ ರೀತಿಗೆ:**

ತುಂಬಿವಿಂಡಿನಂತೆ ಪಾಡಿ
ಜಕ್ಕವಕ್ಕಿಯಂತೆ ಕೂಡಿ
-ಕಬ್ಬಿಗರ ಕಾವ

**ಎರಡನೆಯ ರೀತಿಗೆ:**

ಪೂಟ್ಟನಿಂತು ಕಳೆಯುತುಂ
ತೊಲಗದಿರ್ದರೆಸೆಯುತುಂ||
-ಕಬ್ಬಿಬರ ಕಾವ

## ಮಂದಾನಿಲರಗಳೆ

ಪಾದವೊಂದಕ್ಕೆ ಚತುರ್ಮಾತ್ರಾಗಣವು ನಾಲ್ಕಾಗಲಿ, ಮೂರುಮಾತ್ರೆಯ ಗಣದ ಮುಂದೆ ಐದು ಮಾತ್ರೆಯ ಗಣವು ಬರುವಂತೆ ಗಣಗಳೆರಡೆರಡಾಗಲಿ ಬರಲು ಅದು ಮಂದಾನಿಲರಗಳೆಯೆನಿಸುವುದು. ಇದಕ್ಕೆ ಮಟ್ಟರಗಳೆ ಎಂಬ ಹೆಸರೂ ಉಂಟು.

**ಒಂದನೆಯ ರೀತಿಗೆ:**

ಆ ವೇಳೆಯೊಳತಿಸಂಭ್ರಮಸೆದಿರೆ
ಪೂವಲಿ ಪುರವೀಧಿಗಳೊಳ್ ನೆರೆದಿರೆ
ಪವಳದ ರನ್ನದ ಗುದಿಗಳ ಗುಡಿಗಳ್
ನವಮೌಕ್ತಿಕರಂಗದ ದಾಂಗುಡಿಗಳ್ ||
-ರಾಜಶೇಖರವಿಲಾಸ

**ಎರಡನೆಯ ರೀತಿಗೆ:**

ನಂದನಂಗಳೊಳ್ ಸುೞಿವ ಬಿರಯಿಯಿಂ
ಕಂಪು ಕಣ್ಮಲೆಯೆ ಪೂತ ಸುರಯಿಯಿಂ
ಸುತ್ತಲುಂ ಪರಿವ ಜರಿವೊನಲ್ಗಳಿಂ
ಎತ್ತಲುಂ ನಲಿವ ಪೊಸನವಿಲ್ಗಳಿಂ ||

-ಪಂಪಭಾರತ

## ಲಲಿತರಗಳೆ

ಪಾದವೊಂದಕ್ಕೆ ಐದು ಮಾತ್ರೆಯ ಗಣವು ನಾಲ್ಕಿರಲು ಲಲಿತರಗಳೆಯಾಗುವುದು.

ವಿಷಯವಿಷವಲ್ಲಿಯಂ ಪೆರ್ಚಿಸುವ ಜಲ್ದಾರೆ
ಸಾಧುತ್ವಮಂ ಕಿಡಿಸಿ ನಡಿಸುವ ದುರಾಚಾರೆ
ಕಪಟನಾತಕತತಿಗೆ ತಾನೆ ನೆಲೆಯೆನಿಸುವಳ್
ಕೋಪಗ್ರಹಾವೇಶಜನ್ಮನಿಧಿಯೆನಿಸುವಳ್

-ಕಾದಂಬರಿ